# ಇ-ಸ್ವತ್ತು 2.0

## ಇದೀಗ ಸುದ್ದಿಯಲ್ಲಿದೆ

**ಗ್ರಾಮೀಣ ಪ್ರದೇಶದ ಆಸ್ತಿ ಮಾಲೀಕರು ತಮ್ಮ ದಾಖಲೆಗಳನ್ನು ಯಾವುದೇ ಅಡಚಣೆಯಿಲ್ಲದೆ ಪಡೆಯಲು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ, ರಾಜ್ಯ ಸರ್ಕಾರವು 'ಇ-ಸ್ವತ್ತು 2.0' ವ್ಯವಸ್ಥೆಗೆ ಚಾಲನೆ ನೀಡಿದೆ.**

## ಗುರಿ

ಎಲ್ಲಾ **ಗ್ರಾಮೀಣ ಪ್ರದೇಶದ ಆಸ್ತಿಗಳನ್ನು ಒಂದೇ ಡಿಜಿಟಲ್ ದತ್ತಾಂಶ ಕೋಶ (ಡೇಟಾಬೇಸ್) ದ ವ್ಯಾಪ್ತಿಗೆ ತರುವುದು**, ಪಟ್ಟಿಮಾಡದ ಹಿಡುವಳಿಗಳನ್ನು ಸಕ್ರಮಗೊಳಿಸುವುದು ಮತ್ತು ಪಾರದರ್ಶಕ ಆಸ್ತಿ ತೆರಿಗೆ ಸಂಗ್ರಹಣಾ ವ್ಯವಸ್ಥೆಯನ್ನು ಬಲಪಡಿಸುವುದು ಇದರ ಪ್ರಮುಖ ಗುರಿಯಾಗಿದೆ.

## ಉದ್ದೇಶ

'ಇ-ಸ್ವತ್ತು 2.0' ಎಂಬುದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ **ಗ್ರಾಮೀಣ ಪ್ರದೇಶದ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣ**ಗೊಳಿಸಲು ಮತ್ತು **'ಇ-ಖಾತಾ'** ವಿತರಿಸಲು ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ ಉನ್ನತೀಕರಿಸಿದ ಆನ್‌ಲೈನ್ ವ್ಯವಸ್ಥೆಯಾಗಿದೆ.

## ಸಚಿವಾಲಯ

ಇದನ್ನು **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು** ಗ್ರಾಮ ಪಂಚಾಯಿತಿಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದು, **'ಪಂಚತಂತ್ರ'** ತಂತ್ರಾಂಶದೊಂದಿಗೆ ಸಂಯೋಜಿಸಲಾಗಿದೆ.

**ಕಾರ್ಯ ವಿಧಾನ:-** ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಆಸ್ತಿ ಮಾಲೀಕರು ತಮ್ಮ ಹಕ್ಕು ಪತ್ರಗಳು, ಗುರುತಿನ/ವಿಳಾಸದ ಪುರಾವೆ ಮತ್ತು ಪೂರಕ ದಾಖಲೆಗಳನ್ನು (ತಮ್ಮ ಪಂಚಾಯಿತಿ ಮುಖೇನ) ಸಲ್ಲಿಸುವ ಮೂಲಕ ಇ-ಖಾತಾ ಹಾಗೂ **ನಮೂನೆ 9/11A/11B** ಗಾಗಿ ಅರ್ಜಿ ಸಲ್ಲಿಸಬಹುದು.

## ಪ್ರಯೋಜನಗಳು

- **ವಂಚನೆ ಮತ್ತು ವಿವಾದಗಳನ್ನು ತಗ್ಗಿಸುವುದು.**
- **ಸಾಲ ಸೌಲಭ್ಯಗಳು ಮತ್ತು ನೋಂದಣಿ ಪ್ರಕ್ರಿಯೆಗಳಿಗೆ ಮಾಲೀಕತ್ವದ ಸುಲಭ ಪುರಾವೆ ಒದಗಿಸುವುದು.**
- **ಗ್ರಾಮೀಣ ಆಸ್ತಿ ತೆರಿಗೆಯಿಂದ ಪಂಚಾಯಿತಿ ಮತ್ತು ರಾಜ್ಯದ ಆದಾಯದಲ್ಲಿ ಗಣನೀಯ ಹೆಚ್ಚಳವಾಗುವುದು.**